(ಆ) ಈಗಾಗಲೇ ನಾಡ ಪದ್ಧತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೩೯ ಎಎಸ್‌ಜಿ ೮೦ ದಿನಾಂಕ ೧೦-೯-೧೯೮೧ರಲ್ಲಿ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಈ ಕೆಳಕಂಡ ಹೋಬಳಿಗಳಲ್ಲಿ ಆಚರಣೆಗೆ ತರಲಾಗಿದೆ.

೧. ಗುಡಿಬಂಡೆ—ಬೆಂಗಳೂರು ವಿಭಾಗ

೨. ಹುಲ್ಲಹಳ್ಳಿ ನಂಜನಗೂಡು ತಾಲ್ಲೂಕು—ಮೈಸೂರು ವಿಭಾಗ

೩. ಚಿಕ್ಕೋಡಿ—ಬೆಳಗಾಂ ವಿಭಾಗ

೪. ಯಾದಗಿರಿ—ಗುಲ್ಬರ್ಗಾ ವಿಭಾಗ

ಹಾಗೂ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೨೩೯ ಎಎಸ್‌ಜಿ ೮೦, ದಿನಾಂಕ ೧೧ನೇ ನವೆಂಬರ್ ೧೯೮೨ರಲ್ಲಿ ಗುಲ್ಬರ್ಗಾ ವಿಭಾಗದಲ್ಲಿ ಈ ಕೆಳಗೆ ನಮೂದಿಸಿರುವ ಹೋಬಳಿಗಳಲ್ಲಿ ಸಹ ವಿಸ್ತರಿಸಲಾಗಿದೆ.

೧. ಚಿತ್ತಾಪುರ ತಾಲ್ಲೂಕು—ಕಲಗಿ

೨. ಜೇವರ್ಗಿ ತಾಲ್ಲೂಕು—ಯಡ್ರಾಮಿ

೩. ಶಹಪುರ ತಾಲ್ಲೂಕು—ವಡೇರ

೪. ಚಿತ್ತಾಪುರ ತಾಲ್ಲೂಕು —ಶಹಬಾದ್

೫. ಶೋರಾಪುರ ತಾಲ್ಲೂಕು—ಕೋಡೆಕಾಲ್

ಸದರಿ ಪದ್ಧತಿಯನ್ನು ಇನ್ನೂ ಹೆಚ್ಚಿನ ಹೋಬಳಿಗಳಿಗೆ ವಿಸ್ತರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಜೂಗೌಡ.—ರಾಜ್ಯದ ೯ ಸ್ಥಳಗಳಲ್ಲಿ ನಾಡ ಕಛೇರಿಯನ್ನು ತೆರೆಯುವಾಗ ಯಾವ ಮಾನದಂಡವನ್ನು ಉಪಯೋಗಿಸಿದ್ದೀರಿ ?

ಶ್ರೀ ಬಿ ಆರ್. ಯಾವಗಲ್.—ರಾಜ್ಯದ ಒಂದೊಂದು ರೆವಿನ್ಯೂ ವಿಭಾಗದಲ್ಲಿ ಒಂದೊಂದು ನಾಡ ಕಛೇರಿಯನ್ನು ಪ್ರಯೋಗಾರ್ಥವಾಗಿ ತೆರೆಯಲಾಗಿದೆ. ಇದೇ ಒಂದು ಮಾನದಂಡವನ್ನು ಉಪಯೋಗಿಸಿದ್ದೇವೆ ಬೇರೆ ಯಾವುದೇ ಮಾನದಂಡವನ್ನು ನಾವು ಉಪಯೋಗಿಸಿಲ್ಲ.

ಶ್ರೀ ಜಿ. ರಾಜೂಗೌಡ.—ಯಾವ ತಾಲ್ಲೂಕು ಕೇಂದ್ರಗಳಲ್ಲಿ ಜನಗಳ ಒತ್ತಡವಿದೆ ಯಾವ ತಾಲ್ಲೂಕು ವಿಸ್ತಾರವಾಗಿದೆ ಅಂತಹ ತಾಲ್ಲೂಕುಗಳಲ್ಲಿ ಯಾವುದಾದರೂ ಒಂದು ಹೋಬಳಿ ಮಟ್ಟದಲ್ಲಿ ನಾಡ ಕಛೇರಿಯನ್ನು ತೆರೆಯುವುದನ್ನು ಸರ್ಕಾರದ ಉದ್ದೇಶವಾಗಿದೆ. ಕರ್ನಾಟಕ ರಾಜ್ಯದಲ್ಲಿ ದೊಡ್ಡ ತಾಲ್ಲೂಕು ಆಗಿರತಕ್ಕ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಈಗ ನಮ್ಮ ತಾವೇನು ೯ ಸ್ಥಳಗಳಲ್ಲಿ ನಾಡ ಕಛೇರಿಯನ್ನು ತೆರೆದಿದ್ದೀರಿ ಅದಕ್ಕಿಂತ ಮುಂಚೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ತೆರೆಯಬೇಕಾಗಿತ್ತು. ದಯವಿಟ್ಟು ೧೯೮೬-೮೭ನೇ ಸಾಲಿನಲ್ಲಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ ನಾಡ ಕಛೇರಿಯನ್ನು ತೆರೆಯುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಬಿ. ಆರ್. ಯಾವಗಲ್.—ರಾಜ್ಯದಲ್ಲಿ ೭೭೬ ಸರ್ಕಲ್‌ಗಳಿವೆ, ಎಲ್ಲಾ ಕಡೆಗಳಲ್ಲಿಯೂ ನಾಡ ಕಛೇರಿಯನ್ನು ತೆರೆಯಬೇಕಾಗಿದೆ. ಹಂತ ಹಂತವಾಗಿ ನಾಡ ಕಛೇರಿಗಳನ್ನು ತೆರೆಯಲಾಗುವುದು. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅಲ್ಲಿ ಅವಶ್ಯವಿದ್ದರೆ ಬರುವ ವರ್ಷದಲ್ಲಿ ನಾಡ ಕಛೇರಿಯನ್ನು ತೆರೆಯಲಿಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಜಿ. ರಾಜೂಗೌಡ.—ಇಡೀ ರಾಜ್ಯದಲ್ಲಿ ದೊಡ್ಡ ತಾಲ್ಲೂಕು ಎಂದರೆ ಕೊಳ್ಳೇಗಾಲ ತಾಲ್ಲೂಕು. ತಾಲ್ಲೂಕು ಕೇಂದ್ರದಿಂದ ಒಂದು ಹೋಬಳಿಗೆ ೭೦ ಕಿಲೋಮೀಟರ್ ದೂರವಿದೆ. ದಿನನಿತ್ಯ ಜನರು ಓಡಾಡಿ ತಮ್ಮ ಕೆಲಸ ಮಾಡಿಸಿಕೊಳ್ಳುವುದು ಬಹಳ ಕಷ್ಟವಾಗಿದೆ. ಆದ್ದರಿಂದ ದಯವಿಟ್ಟು ಈ ವರ್ಷದಲ್ಲಿಯೇ ಕೊಳ್ಳೇಗಾಲ ತಾಲ್ಲೂಕಿನ ಯಾವುದಾದರೂ ಒಂದು ಹೋಬಳಿಯಲ್ಲಿ ನಾಡ ಕಛೇರಿಯನ್ನು ತೆರೆಯುವ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ನಿರ್ದಿಷ್ಟವಾಗಿ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಮುಂದಿನ ವರ್ಷದಲ್ಲಿ ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ನಾಡ ಕಛೇರಿಯನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. ೨೪೫೫ (೮೦೧) ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.
ಪ್ರಶ್ನೆ ನಂ. ೨೪೬ (೪೬೭) ಸದಸ್ಯರ ಗೈರು ಹಾಜರಿ.

ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ನೀರಾವರಿ ಕೆರೆಯ ಬಗ್ಗೆ

೩೦೨. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನಲ್ಲಿ ಚಿಕ್ಕ ನೀರಾವರಿ ಕೆರೆಯಲ್ಲಿ ಮುಳುಗಡೆಯಾದ ಭೂಮಿಗೆ ಪರಿಹಾರವೆಂದು ಭೂ ಮಾಲೀಕರಿಗೆ ಕೊಡಬೇಕಾದ ಮೊತ್ತವೆಷ್ಟು,

ಆ) ಎಷ್ಟು ವರ್ಷದಿಂದ ಪರಿಹಾರದ ಹಣ ಕೊಡುವುದು ಬಾಕಿ ಉಳಿದಿದೆ, ಹಾಗೂ ಈಗ ಬಾಕಿ ಉಳಿದಿರುವ ಹಣದ ಮೊತ್ತವೆಷ್ಟು,

ಇ) ಪರಿಹಾರದ ಹಣವನ್ನು ಕೊಡುವಲ್ಲಿ ವಿಳಂಬವಾಗಲು ಕಾರಣಗಳೇನು ?

ಈ) ಪರಿಹಾರದ ಹಣವನ್ನು ಸಂಬಂಧಪಟ್ಟವರಿಗೆ ಸರ್ಕಾರದವರು ಕೊಡುವಲ್ಲಿ ತೆಗೆದುಕೊಂಡ ತುರ್ತು ಕ್ರಮಗಳು ಯಾವುವು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—

ಅ) ರೂ. ೩,೧೦,೬೪೪–೬೭ (ನ್ಯಾಯಾಲಯವು ಹೆಚ್ಚಿಸಿರುವ ಹಣ ಸೇರಿ).

ಆ) ವಿಳಂಬವಾಗಿಲ್ಲ. ಹೆಚ್ಚುವರಿ ಕ್ಷೇತ್ರಕ್ಕಾಗಿ, ಭೂಸ್ವಾಧೀನ ನಡವಳಿಕೆಗಳು ಐ ತೀರ್ಪ್ ಹಂತದಲ್ಲಿವೆ ಮತ್ತು ನ್ಯಾಯಾಲಯವು ಪರಿಹಾರವನ್ನು ಹೆಚ್ಚಿಸಿರುವುದರಿಂದ, ಇನ್ನೂ ೨,೧೩,೨೭೯–೩೦ ರೂ. ಹಣವನ್ನು ಪಾವತಿ ಮಾಡಬೇಕಾಗಿದೆ.

ಇ) ವಿಳಂಬವಾಗಿಲ್ಲ. ಲೋಕೋಪಯೋಗಿ ಇಲಾಖೆಯಿಂದ ಪ್ರಸ್ತಾವನೆಗಳು ಬಂದ ನಂತರ ಭೂ ಸ್ವಾಧೀನ ನಡವಳಿಕೆಯನ್ನು ಪ್ರಾರಂಭವಾಡಲಾಗಿದೆ.

ಈ) ಲೋಕೋಪಯೋಗಿ ಇಲಾಖೆಯಿಂದ ಹಣವನ್ನು ಪಡೆದ ನಂತರ ಮತ್ತು ಐ ತೀರ್ಪುಗಳು ಅನುಮೋದಿಸಲ್ಪಟ್ಟ ನಂತರ, ಪರಿಹಾರವನ್ನು ಪಾವತಿ ಮಾಡಲಾಗುವುದು.

ಶ್ರೀ ಜಿ. ಎಸ್. ದೊಡ್ಡಮೇಟಿ.—ಚಿಕ್ಕ ನೀರಾವರಿ ಕೆರೆಯಲ್ಲಿ ಮುಳುಗಡೆಯಾದ ಕ್ಷೇತ್ರ ಎಷ್ಟು ? ಪರಿಹಾರ ಕೊಡುವುದರಲ್ಲಿ ವಿಳಂಬವಾಗಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ನ್ಯಾಯಾಲಯವು ಪರಿಹಾರವನ್ನು ಹೆಚ್ಚು ಕೊಡಬೇಕೆಂದು ನಿರ್ಣಯ ಕೈಗೊಂಡಿದ್ದು ಯಾವ ವರ್ಷ ? ಎಷ್ಟು ಎಕರೆ ಭೂಮಿ ಮುಳುಗಡೆಯಾಗಿದೆ ? ಕೆರೆಗಳು ಎಷ್ಟಿವೆ ಅದನ್ನು ಹೇಳಬೇಕು ?

ಶ್ರೀ ಬಿ. ಆರ್. ಯಾವಗಲ್ (ಕಂದಾಯ ಮಂತ್ರಿಯವರ ಪರವಾಗಿ).— ಒಟ್ಟು ಐದು ಸಣ್ಣ ನೀರಾವರಿ ಕೆರೆಗಳಾಗಿವೆ. ಮುಳುಗಡೆಯಾದ ಕ್ಷೇತ್ರ ೧೯೬ ಎಕರೆ ೩೯ ಗುಂಟೆ. ನ್ಯಾಯಾಲಯವು ಪರಿಹಾರವನ್ನು ಹೆಚ್ಚು ಕೊಡಬೇಕೆಂದು ನಿರ್ಣಯ ಕೊಟ್ಟಿದ್ದು ಕಳೆದ ವರ್ಷ ನವೆಂಬರ್ ತಿಂಗಳಿನಲ್ಲಿ.

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದ ಲೆಕ್ಕದಲ್ಲಿ ವಿಳಂಬ ಎಂದರೆ ಎಷ್ಟು ವರ್ಷ ? ಐದು ವರ್ಷ ಅಥವಾ ೧೦ ವರ್ಷ ಯಾವುದು ಹೇಳಿ ? ನಿಮ್ಮ ಇವೊತ್ತಿನ ಲೆಕ್ಕದ ಪ್ರಕಾರ ಪರಿಹಾರವನ್ನು ಎಷ್ಟು ವರ್ಷದಲ್ಲಿ ಕೊಡುತ್ತೀರಿ ? ಅವರ ಬಗ್ಗೆ ತಾವು ಸಭೆಗೆ ಭರವಸೆಯನ್ನು ಕೊಡಬೇಕು.

ಶ್ರೀ ಬಿ. ಆರ್. ಯಾವಗಲ್.—ವಿಳಂಬ ಆಗದ ರೀತಿಯಲ್ಲಿ ಪ್ರಥಮವಾಗಿ ಕೊಡತಕ್ಕ ಪರಿಹಾರವನ್ನು ಕೊಡಲಾಗಿದೆ. ಹೆಚ್ಚುವರಿ ಪರಿಹಾರವನ್ನು ಕೊಡಬೇಕೆಂದು ನ್ಯಾಯಾಲಯದಿಂದ ಬಂದ

ಆದೇಶದ ಪ್ರಕಾರ ಪರಿಹಾರ ಕೊಡುವುದು ವಿಳಂಬವಾಗಿದೆ. ಇದರ ಬಗ್ಗೆ ಅನೇಕ ವಾದಗಳಿವೆ. ಆದಷ್ಟು ಬೇಗ ಪರಿಹಾರವನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಅಲ್ಲಿ ಕೆರೆಗಳು ಎಷ್ಟಿವೆ ?

ಶ್ರೀ ಬಿ. ಆರ್. ಯಾವಗಲ್.—ಐದು ಕೆರೆಗಳಿವೆ. ಕಂಂಟಿಸಿ, ನಾಗರಸಿಕೊಪ್ಪ, ಪಾರ್ವತಿ ಕೊಪ್ಪ, ಗೋಗೇರಿ ಈ ತರಹ ಐದು ಕೆರೆಗಳಿವೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ನಾಗೇಂದ್ರಘಡದ ಕೆರೆ ಕೂಡ ಇದೆ ಅದು ಬಿಟ್ಟು ಹೋಗಿದೆರ

ಶ್ರೀ ಬಿ. ಆರ್. ಯಾವಗಲ್.—ನಾಗೇಂದ್ರಘಡದ ಕೆರೆಯನ್ನು ಬಿಟ್ಟು ಬೇರೆ ಕೆರೆಗಳು ಫೈನಲ್ ಆಗಿವೆ. ಮಾನ್ಯ ಸದಸ್ಯರು ಹೇಳತಕ್ಕ ಕೆರೆಯ ಮಾಹಿತಿ ಇಲ್ಲ. ಮಾಹಿತಿಯನ್ನು ಕೊಟ್ಟರೆ ಅದ. ಬಗ್ಗೆ ಸರ್ಕಾರ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ನಾನು ಸ್ವತಃ ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಗೆ ಹೋಗಿದ್ದೆ. ಅವರು ಏನು ಹೇಳುತ್ತಾರೆ ಅದು ಬಹಳ ವಿಷಾದದ ಸಂಗತಿ. ಫೈಲುಗಳು ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಯಿಂದ ಸೆಕ್ರೆಟರಿಯೇಟ್‌ಗೆ ಹೋಗಿವೆಯೆಂದು ಹೇಳುತ್ತಾರೆ. ಸೆಕ್ರೆಟರಿಯೇಟ್‌ನಲ್ಲಿ ಕೇಳಿದರೆ ಅವರಿಗೆ ಕಳುಹಿಸಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ಬಹುಶಃ ಆ ಫೈಲುಗಳು ಎಲ್ಲಿ ಹೋಗಿವೆಯೋ ಎನ್ನುವುದು ಅವರು ಹೇಳುವ ಮಾತಿನಿಂದ ಗೊತ್ತಾಗುತ್ತದೆ. ೀ ಸರ್ವೆ ಮಾಡುವ ಪ್ರಯತ್ನ ಮೊನ್ನೆ ಮೊನ್ನೆಯಿಂದ ನಡೆಯುತ್ತಿದೆ. ನಾಗೇಂದ್ರಘಡದ ಫೈಲುಗಳು ಎಲ್ಲಿ ಕಾಣೆಯಾಗಿವೆಯೋ ಗೊತ್ತಿಲ್ಲ. ಆ ಫೈಲುಗಳನ್ನು ಪತ್ತೆಹಚ್ಚುವ ಕೆಲಸವನ್ನು ಮೊದಲು ಆಗಬೇಕಾ.

ಶ್ರೀ ಬಿ. ಆರ್. ಯಾವಗಲ್.—ಈ ಪ್ರಕರಣದ ಬಗ್ಗೆ ವಿಚಾರ ಮಾಡಿ ಸರ್ಕಾರ ಶೀಘ್ರ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. ೨೪೮(೯೪೨) ಸದಸ್ಯರು ಹಾಜರಿಲ್ಲ, ಪ್ರಶ್ನೆ ನಂ. ೨೪೯(೨೮೮) ಸದಸ್ಯರು ಹಾಜರಿಲ್ಲ.

ಸಹಕಾರ ಇಲಾಖೆಯಲ್ಲಿ ನೇಮಕಾತಿಯ ಸೇವಾ ನಿಯಮಗಳು

೫೦. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಸಹಕಾರ ಇಲಾಖೆಯ ಹುದ್ದೆ ಮತ್ತು ನೇಮಕಾತಿಯ ನಿಯಮಗಳ ಮಂಜೂರಾತಿಯು ಇನ್ನೂ ಬಾಕಿ ಇವೆಯೆ ?

ಬಿ) ಇದರ ಪರಿಣಾಮವಾಗಿ ನೌಕರರಿಗೆ ಬಡ್ತಿ ಕೊಡುವಾಗ ಏನಾದರೂ ತಾರತಮ್ಯ ಉಂಟಾಗಿದೆಯೇ ?

ಸಿ) ಈ ವಿಚಾರದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಯಾವುದಾದರೂ ರಿಟ್ ಅರ್ಜಿ ಹಾಕಲಾಗಿದೆಯೇ?

ಡಿ) ಹಾಗಿದ್ದರೆ, ಎಷ್ಟು ಬಾಕಿ ಉಳಿದಿವೆ ಹಾಗೂ ಎಷ್ಟು ನಿತ್ಯರ್ಥವಾಗಿವೆ ?

ಇ) ಉಚ್ಚ ನ್ಯಾಯಾಲಯದಲ್ಲಿ ತೀರ್ಮಾನವಾದ ಪ್ರಕರಣಗಳಲ್ಲಿ ಯಾವುದಾದರೂ ಕಾರ್ಯಗತವಾಗದೆ ಇದೆಯೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಎ) ಸಹಕಾರ ಇಲಾಖೆಯಲ್ಲಿ ಅಸ್ತಿತ್ವದಲ್ಲಿರುವ ಸಿಬ್ಬಂದಿ ವರ್ಗದ ಮತ್ತು ನೇಮಕಾತಿ ನಿಯಮಾವಳಿಗಳು ಪುನರ್ ಪರಿಶೀಲನೆಯಲ್ಲಿವೆ.

ಬಿ) ಇಲ್ಲ.

ಸಿ) ಹೌದು.